# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

**ಸಿ.ಸಿ. ನಂಃ 21/2019**

**ಸಿ.ಡಬ್ಲೂಃ 11 ಪಿಡಬ್ಲೂಃ 07**

ಸಾಕ್ಷಿದಾರರ ಹೆಸರುಃ ರಾಮಣ್ಣ ನಾಯ್ಕ. ತಂದೆಃರಾಮಚಂದ್ರಪ್ಪ ನಾಯ್ಕ
ವಯಸ್ಸುಃ 65 ವರ್ಷ
ಉದ್ಯೋಗಃ ನಿವೃತ್ತ ಪಿ.ಎಸ್.ಐ
ಸಾಕೀನಃ ಕೊಪ್ಪಳ

ದಿಃ **27-05-2026** ರಂದು ಸಾಕ್ಷಿಗೆ ಆಡಿಯೋ ವಿಡಿಯೋ ಮೂಲಕ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ ;

ನಾನು ದಿ.**21-05-2017** ರಿಂದ **19-07-2018** ರವರೆಗೆ ಹಿರೇಹಡಗಲಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕೆಲಸ ಮಾಡಿರುತ್ತೇನೆ.

**02.** ಸದರಿ ಪ್ರಕರಣದಲ್ಲಿ ದಿಃ **27-08-2017** ರಂದು ಹಗರನೂರು ಕೆರೆಯ ಹತ್ತಿರ ನಾನು ನಮ್ಮ ಠಾಣಾ ಸಿಬ್ಬಂಧಿಗಳಾದ ಚಾ.ಸಾ.**02, 03** ಮತ್ತು **05** ರವರನ್ನು ಕರೆದುಕೊಂಡು ಗಣೇಶ ಮೂರ್ತಿ ವಿಸರ್ಜನೆಯ ಬಂದೂಬಸ್ತ ಕರ್ತವ್ಯ ಮಾಡುತ್ತಿದ್ದಾಗ ಸಂಜೆ.**05.00** ಗಂಟೆಗೆ ಹಗರನೂರು ಬೀಟ್ ಪೊಲೀಸ್ ಚಾ.ಸಾ.**04** ರವರು ಮಾನ್ಯರ ಮಸಲವಾಡ ಗ್ರಾಮದಲ್ಲಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿರುವುದಾಗಿ ಖಚಿತ ಮಾಹಿತಿ ಬಂದಿರುತ್ತದೆ ಎಂದು ತಿಳಿಸಿರುತ್ತಾರೆ ಆಗ ನಾನು ಮತ್ತು ಸಿಬ್ಬಂಧಿಗಳಾದ ಚಾ.ಸಾ.**02, 03** ಮತ್ತು **05** ರವರು ಸೇರಿ ನಮ್ಮ ಇಲಾಖಾ ಜೀಪಿನಲ್ಲಿ ದಾಳಿಗೆ ಹೋಗಲು ಚಾ.ಸಾ.**04** ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದು ಅದರಂತೆ ಚಾ.ಸಾ.**04** ರವರು ಚಾ.ಸಾ.**06** ಮತ್ತು **07** ರವರನ್ನು ಪಂಚರನ್ನಾಗಿ ಕರೆದುಕೊಂಡು ಬಂದು ನನ್ನ ಮುಂದೆ ಹಾಜರುಪಡಿಸಿದ್ದು ಆಗ ಸದರಿ ಪಂಚರಿಗೆ ನನಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಹೋಗಲು ಪಂಚರಾಗಿ ಸಹಕರಿಸಬೇಕೆಂದು ಕೇಳಿಕೊಂಡ ಮೇರೆಗೆ ಅವರು ಒಪ್ಪಿದ್ದರಿಂದ ನಮ್ಮ ಜೀಪಿನಲ್ಲಿ ನಾನು ಮತ್ತು ಸಿಬ್ಬಂಧಿಗಳು ಹಾಗೂ ಪಂಚರು ಸೇರಿ **05.00** ಗಂಟೆಗೆ ನಾವು ಇರುವ ಸ್ಥಳದಿಂದ ಹೊರಟು **05.45** ಗಂಟೆಗೆ ಬಾತ್ಮಿ ಬಂದ ಸ್ಥಳಕ್ಕೆ ಹೋಗಿರುತ್ತೇವೆ. ಆಗ ಮಾನ್ಯರ ಮಸಲವಾಡ ಗ್ರಾಮದ ನೀರಿನ ಟ್ಯಾಂಕ ಹತ್ತಿರ ನಮ್ಮ ವಾಹನವನ್ನು ನಿಲ್ಲಿಸಿ ಮರೆಯಾಗಿ ನೋಡಲಾಗಿ ಸದರಿ ನೀರಿನ ಟ್ಯಾಂಕ ಹತ್ತಿರ ಇಬ್ಬರು ವ್ಯಕ್ತಿ ಮಧ್ಯ ಮಾರಾಟ ಮಾಡುತ್ತಿರುವುದನ್ನು ಖಚಿತ ಪಡೆಸಿಕೊಂಡು ಆತನ ಮೇಲೆ ದಾಳಿ ಮಾಡುತ್ತಿದ್ದಂತೆ ಅವರು ಓಡಿ ಹೋಗಿರುತ್ತಾರೆ. ಸದರಿ ಓಡಿ ಹೋದ ವ್ಯಕ್ತಿಗಳ ಕುರಿತು

ಹೆಸರು ವಿಳಾಸ ಕೇಳಲಾಗಿ ಸದರಿ ಗ್ರಾಮದ ಸಾರ್ವಜನಿಕರು ಅವರ ಹೆಸರು ಸುಬಾಷ ಮತ್ತು ನಿಂಗಜ್ಜ ಎಂದು ತಿಳಿಸಿರುತ್ತಾರೆ. ಆಗ ಸದರಿ ಇಬ್ಬರು ವ್ಯಕ್ತಿಗಳು ಸ್ಥಳದಲ್ಲಿ ಬಿಟ್ಟು ಹೋಗಿದ್ದ ಒಂದು ಪ್ಲಾಸ್ಟಿಕ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ ಅದರಲ್ಲಿ **180** ಎಮ್.ಎಲ್.ನ ರಾಜಾ ವಿಸ್ಕೀಯ **20** ಬಾಟಲಗಳು, **90** ಎಮ್.ಎಲ್.ನ ಬೆಂಗಳೂರು ಮಾಲ್ಟ ವಿಸ್ಕೀಯ **18** ಟೆಟ್ರಾಪ್ಯಾಕಗಳು ದೊರೆತಿರುತ್ತವೆ ಮತ್ತು ನಗದು ಹಣ ರೂ.**250/-** ದೊರೆತಿರುತ್ತದೆ. ಸದರಿ ಮಧ್ಯದ ಬಾಟಲ, ಪೌಚಗಳು ಮತ್ತು ಹಣವನ್ನು ಪಂಚರ ಸಮಕ್ಷಮ ಜಪ್ತು ಪಡೆಸಿಕೊಂಡು ಸ್ಥಳದಲ್ಲಿ ಸಂಜೆ.**06.00** ರಿಂದ **07.00** ಗಂಟೆಯವರೆಗೆ ಪಂಚನಾಮೆ ಜರೂಗಿಸಿರುತ್ತೇನೆ. ರಾತ್ರಿ **08.00** ಗಂಟೆಗೆ ಪಂಚನಾಮೆ ಮಧ್ಯದ ಬಾಟಲ, ಪೌಚ ಮತ್ತು ನಗದು ಹಣದೊಂದಿಗೆ ಠಾಣೆಗೆ ಬಂದು ಆರೋಪಿತರ ವಿರುದ್ದ ಚಾ.ಸಾ.**10** ರವರಿಗೆ ದೂರು ಸಲ್ಲಿಸಿರುತ್ತೇನೆ. ಸಾಕ್ಷಿಯು ನಿ.ಪಿ.**01** ರ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.**01** ಸಿ. ಎಂದು ಗುರುತಿಸಲಾಯಿತು. ಸಾಕ್ಷಿಯು ನಿ.ಪಿ.**02** ರ ಕಚ್ಚಾ ನಕಾಶೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.**02** ಸಿ. ಎಂದು ಗುರುತಿಸಲಾಯಿತು. ಸಾಕ್ಷಿಯು ನಿ.ಪಿ.**03** ರ ದೂರನ್ನು ನೋಡಿ ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.**03** ಬಿ. ಎಂದು ಗುರುತಿಸಲಾಯಿತು. ಸಾಕ್ಷಿಯು ನಿ.ಪಿ.**04** ರ ಪ್ರ.ವ ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.**04** ಬಿ. ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.**01** ಮತ್ತು **02** ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಇಂದು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಘಟನಾ ದಿನದಂದು ಮದ್ಯ ಮಾರಾಟ ಮಾಡುತ್ತಿದ್ದ ಸುಭಾಷ ಮತ್ತು ನಿಂಗರಾಜ ಆಗಿರುತ್ತಾರೆ ಎಂದು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆ.ಕೆ._ವಕೀಲರಿಂದಃ</u>

**03.** ಈ ಪ್ರಕರಣದಲ್ಲಿ ದೂರುದಾರರು ಮತ್ತು ತನಿಖಾಧಿಕಾರಿ ನಾನೇ ಇರುತ್ತೇನೆ ಎಂದರೆ ಕೇವಲ ದೂರನ್ನು ನಾನು ಸಲ್ಲಿಸಿರುತ್ತೇನೆ. ಈ ಪ್ರಕರಣದ ದೂರನ್ನು ಯಾರು ಗಣಕೀಕರಣ ಮಾಡಿರುತ್ತಾರೆ ಎಂದು ನನಗೆ ನೆನಪಾಗುತ್ತಿಲ್ಲ, ಅವರು ಠಾಣಾ ಬರಹಗಾರರಾಗಿರುತ್ತಾರೆ ಅವರ ಹೆಸರು ನೆನಪು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಕಾಂಬಳೆ ಎನ್ನುವವರು ಗಣಕೀಕೃತ ಮಾಡಿರುತ್ತಾರೆ. ದೂರಿನಲ್ಲಿ ಕಾಂಬಳೆ ಎನ್ನುವವರು ಗಣಕೀಕೃತ ಮಾಡಿರುತ್ತಾರೆ ಎಂದು ಬರೆದಿರುವುದಿಲ್ಲ.

**04.** ದಾಳಿಗೆ ಒಟ್ಟು **06** ಜನ ಹೋಗಿರುತ್ತೇವೆ. ಇಲಾಖಾ ವಾಹನವನ್ನು ಜೀಪ ಚಾಲಕನಾದ ಎ.ಪಿ.ಸಿ. **15** ರವರು ಚಲಾಯಿಸಿಕೊಂಡು ಹೋಗಿರುತ್ತೇವೆ. ಮಾನ್ಯರ ಮಸಲವಾಡದ ತೇರು ಬೀದಿಯ ಪೂರ್ವ ದಿಕ್ಕಿನಲ್ಲಿ ಓವರ ಹೆಡ್ಡ ಟ್ಯಾಂಕ ಇರುತ್ತದೆ. ತೇರು ಬೀದಿಯಿಂದ ಸುಮಾರು **200** ಮೀಟರ ದೂರದಲ್ಲಿ ಓವರ ಹೆಡ್ಡ ಟ್ಯಾಂಕ ಇರುತ್ತದೆ. ಎಷ್ಟು ಸಾರ್ವಜನಿಕರು ಇದ್ದರು ಎಂದು ಹೇಳಲು ಆಗುವುದಿಲ್ಲ ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ಆರೋಪಿತನ ಹೆಸರನ್ನು ಹೇಳಿದವರ ಹೆಸರನ್ನು ಹೇಳಲು ಆಗುವುದಿಲ್ಲ. ದಾಳಿ ಮಾಡಿದ ಸಂದರ್ಭದಲ್ಲಿ ಛಾಯಾ ಚಿತ್ರ ಹಾಗೂ ವಿಡಿಯೋ ಚಿತ್ರಿಕರಣ ಮಾಡಿರುವುದಿಲ್ಲ. ನಮ್ಮ ಹತ್ತಿರ ಇದ್ದ ಫೋನ ಅಥವಾ ಲ್ಯಾಪಟಾಪಿನ ಮುಖಾಂತರ ದಾಳಿ ಮಾಡಿದ ಸಂದರ್ಭದಲ್ಲಿ ಛಾಯಾ ಚಿತ್ರ ಹಾಗೂ ವಿಡಿಯೋ ಚಿತ್ರಿಕರಣ ಮಾಡಲು ತೊಂದರೆ ಇರಲಿಲ್ಲ ಆದರೆ ನಾವು ಮಾಡಿರುವುದಿಲ್ಲ.

**05.** ನಾವು ಜಪ್ತು ಮಾಡಿದ ಹಣವು ಎಷ್ಟು ನೋಟುಗಳು ಹಾಗೂ ಯಾವ ಮುಖಬೆಲೆಯ ನೋಟುಗಳು ಎಂದು ನೆನಪು ಇರುವುದಿಲ್ಲ. ಪ್ರತಿ ಪಂಚರ ಎರಡು ಸಹಿಯನ್ನು ತೆಗೆದುಕೊಂಡಿರುತ್ತೇವೆ. ನಾವು ಯಾವುದೇ ದಾಳಿಯನ್ನು ಮಾಡಿರುವುದಿಲ್ಲ, ಆರೋಪಿತರು ನಮ್ಮನ್ನು ಓಡಿ ಹೋಗಿರುವುದಿಲ್ಲ, ಹಾಗೂ ಆರೋಪಿತರು ಮಾನ್ಯರ ಮಸಲವಾಡದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಮುದ್ದೆಮಾಲನ್ನು ಜಪ್ತುಮಾಡಿಕೊಂಡು ಬಂದಿರುತ್ತೇವೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ. ಅಲ್ಲಿ ಯಾರು ಸಹ ಆರೊಪಿತರ ಹೆಸರನ್ನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಏನನ್ನೂ ಸಹ ಜಪ್ತು ಮಾಡಿರುವುದಿಲ್ಲ ಹಾಗೂ

**ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಕೂಡ ಅಂಕಿಸಂಖ್ಯೆಗೋಸ್ಕರ ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವಂತಹ ಮುದ್ದೆಮಾಲುಗಳು ಹೊರಗಡೆ ಸಾಕಷ್ಟು ಸಿಗುತ್ತವೆ ಎಂದರೆ ವೈನ ಶಾಪಿನಲ್ಲಿ ಸಿಗುತ್ತವೆ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ಎಲ್ಲ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.**

**ಮರುವಿಚಾರಣೆಃ** ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸರಿ ಇದೆ,**　　　　" ನನ್ನ ಸಮಕ್ಷಮ "

Sd/-
**(ಶ್ರೀಮತಿ.ಅಕ್ಷತಾ ಟಿ .)**
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು., ಹಡಗಲಿ.